ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು.

ಸಂಖ್ಯೆ: ಎಡಿಎಂ-2[4]ಮ.ಶಿ.ಹ-22/2020-21 ದಿನಾಂಕ:-08-01-2021

## ಸುತ್ತೋಲೆ

ವಿಷಯ: ವಿದ್ಯಾವಿಕಾಸ ಯೋಜನೆಯನ್ನು ಶಾಲೆಯಿಂದ ಹೊರಗುಳಿದ ಮಕ್ಕಳನ್ನು ದಾಖಲಿಸಲು ವಿಸ್ತರಿಸುವ ಬಗ್ಗೆ

ಉಲ್ಲೇಖ; 1) ಸುತ್ತೋಲೆ ಸಂಖ್ಯೆ: ಎಡಿಎಂ-2[4]ಮ.ಶಿ.ಹ-22/2020-21 ದಿ 8-01-2021

2) ಮಾನ್ಯ ನ್ಯಾಯಾಲಯದ ಪ್ರಕರಣ ಸಂಖ್ಯೆ; ಡಬ್ಲ್ಯು.ಪಿ-10096/2020

*******

ಪ್ರಾಥಮಿಕ ಶಾಲಾ ಸಾರ್ವತ್ರೀಕರಣ ಕುರಿತಂತೆ 6 ರಿಂದ 14 ವರ್ಷ ವಯೋಮಿತಿಯ ಶಾಲೆಯಿಂದ ಹೊರಗುಳಿದ - ಟ್ರಾಫಿಕ್ ಸಿಗ್ನಲ್‌ಗಳಲ್ಲಿ ಗೊಂಬೆ ಮತ್ತು ಹೂವುಗಳನ್ನು ಮಾರುವ ಮಕ್ಕಳು, ಪರಿತ್ಯಕ್ತ ಮಕ್ಕಳು, ಬೀದಿ ಮಕ್ಕಳು, ಅನಾಥ ಮಕ್ಕಳು ಇತ್ಯಾದಿ ಮಕ್ಕಳನ್ನು ಶಾಲಾ ಮುಖ್ಯವಾಹಿನಿಗೆ ತರುವ ದೃಷ್ಟಿಯಿಂದ ಪ್ರಾಥಮಿಕ 1 ರಿಂದ 8 ನೇ ತರಗತಿಯ ಪ್ರವೇಶ ಪಡೆಯಲು ಬರುವ ಮಕ್ಕಳನ್ನು ವಯಸ್ಸು ಮತ್ತು ಕಲಿಕೆಯ ಆಧಾರದ ಮೇಲೆ ಶಾಲೆಗೆ ದಾಖಲು ಮಾಡಿಕೊಳ್ಳಲು ಈಗಾಗಲೇ ಉಲ್ಲೇಖ-1 ರಲ್ಲಿ ತಿಳಿಸಲಾಗಿದೆ.

ಮಕ್ಕಳನ್ನು ಶಾಲೆಗೆ ದಾಖಲು ಮಾಡಿ, ನಂತರ ಕಡ್ಡಾಯ ಪ್ರಾಥಮಿಕ ಶಿಕ್ಷಣದ ವಿದ್ಯಾವಿಕಾಸ ಯೋಜನೆಯ ಅಡಿಯಲ್ಲಿ ಉಚಿತ ಪಠ್ಯಪುಸ್ತಕ, ಸಮವಸ್ತ್ರ, ಮಧ್ಯಾಹ್ನದ ಬಿಸಿಯೂಟ, ಶೂ ಸಾಕ್ಸ್ ವಿತರಣೆ ಹಾಗೂ ಆರ್.ಟಿ.ಇ ಅಡಿಯಲ್ಲಿ ನಿಯಮಾನುಸಾರ ಕಲ್ಪಿಸಲಾಗಿರುವ ಎಲ್ಲಾ ಸೌಲತ್ತುಗಳು ಮತ್ತು ಇತ್ಯಾದಿ ಪ್ರೋತ್ಸಾಹದಾಯಕ ಯೋಜನೆಗಳಡಿ ಬರುವ ಎಲ್ಲಾ ಸೌಕರ್ಯಗಳು ಒದಗಿಸಿ, ಇವರನ್ನು ಮುಖ್ಯವಾಹಿನಿಗೆ ತರಲು ಎಲ್ಲಾ ಅಗತ್ಯ ಕ್ರಮವಹಿಸಲು ತಿಳಿಸಿದೆ.

ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ

ಪ್ರತಿಯನ್ನು

1. ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ, ಬೆಂಗಳೂರು-01 ಇವರಿಗೆ ಸೂಕ್ತಕ್ರಮಕ್ಕಾಗಿ
2. ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ) ಮತ್ತು ಅಭಿವೃದ್ಧಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಇವರಿಗೆ ಸೂಕ್ತಕ್ರಮಕ್ಕಾಗಿ
3. ರಾಜ್ಯದ ಎಲ್ಲಾ ಕ್ಷೇತ್ರಶಿಕ್ಷಣಾಧಿಕಾರಿಗಳು/ಕ್ಷೇತ್ರಸಮನ್ವಯಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ಇವರಿಗೆ ಸೂಕ್ತಕ್ರಮಕ್ಕಾಗಿ
4. ಕಛೇರಿ ಪ್ರತಿ